**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂಃ970/2013**

| | | | |
|---|---|---|---|
| **ಚಾಸಾ ಃ** | **2** | **ಪ್ರಾಸಾಃ-** | **2** |

| | |
|---|---|
| ಹೆಸರು | ಶಂಭುಲಿಂಗಯ್ಯ |
| ತಂದೆಯ ಹೆಸರು | ಲಿಂಗಪ್ಪ |
| ವಯಸ್ಸು | 80 |
| ಉದ್ಯೋಗ | ವ್ಯವಸಾಯ |
| ವಿಳಾಸ | ಶಂಬೇಗೌಡನದೊಡ್ಡಿ ಗ್ರಾಮ |

- - - - - - - - - - - - - - - - - - - - - - - - - - - - - -

**ದಿಃ06.09.2022ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ಚಾಸಾ-1 ಜಯರಾಮಯ್ಯ, ಚಾಸಾ-3 ಮತ್ತು 4 ರವರು ನನಗೆ ಸಹೋದರರಾಗಬೇಕು. ಆರೋಪಿತರ ಪರಿಚಯವಿರುತ್ತದೆ.

ಕಡಸಿಕೊಪ್ಪ ಗ್ರಾಮದಲ್ಲಿ ನಮ್ಮ ತಾಯಿ ಕೆಂಪಮ್ಮ ಇವರಿಗೆ ಸೇರಿದ ಸರ್ವೆ ನಂ.91/1 ಕ್ಷೇತ್ರ 1 ಎಕರೆ ಜಮೀನು ಅವರ ಮರಣದ ನಂತರ ನಾನು ಸದರಿ ಜಮೀನಿನ ಸ್ವಾಧೀನಾನುಭವದಲ್ಲಿ ಇರುತ್ತೇನೆ. ನನ್ನ ತಾಯಿ ದಿನಾಂಕ.03.10.1997 ರಂದು ಮೃತಪಟ್ಟಿರುತ್ತಾರೆ. ದಿನಾಂಕ.1.2.2012 ರಂದು ಕನಕಪುರ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ 1 ನೇ ಆರೋಪಿ ಇತರ ಆರೋಪಿಗಳ ಜೊತೆ ಸೇರಿಕೊಂಡು ನನ್ನ ತಾಯಿಯ ಹೆಸರಿಗಿದ್ದ ಸರ್ವೆ ನಂ.91/1 ನ್ನು ತನ್ನ ಹೆಸರಿಗೆ ನೋಂದಣಿ ಮಾಡಿಸಿಕೊಂಡು ನಂತರ ತನ್ನ ಹೆಸರಿಗೆ ಖಾತೆಗಳನ್ನು ಬದಲಾಯಿಸಿಕೊಂಡಿರುತ್ತಾನೆ. ನನ್ನ ತಾಯಿ ಕೆಂಪಮ್ಮಳ ಹೆಸರಿನಲ್ಲಿ

ಬೇರೊಬ್ಬ ವೃದ್ದೆಯನ್ನು ಕೆಂಪಮ್ಮ ಎಂದು ತೋರಿಸಿ ಪೋಟೋ ತೆಗೆಯಿಸಿ ಅಕ್ರಮ ನೋಂದಣಿ ಮಾಡಿಕೊಂಡು 1 ನೇ ಆರೋಪಿ ಇತರ ಆರೋಪಿತರೊಂದಿಗೆ ಕೊಡಿಕೊಂಡು ತನ್ನ ಹೆಸರಿಗೆ ಖಾತೆ ಮಾಡಿಕೊಂಡಿದ್ದು ಇರುತ್ತದೆ. ನಂತರ ಸದರಿ ಅಕ್ರಮ ಕ್ರಯದ ಕುರಿತು ನನಗೆ ದೂರು ದಾಖಲಿಸುವ ಒಂದು ವಾರ ಮುಂಚೆ ತಿಳಿದುಬಂದಿದ್ದು, ನಂತರ ಹಾರೋಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಲು ಹೋದಾಗ ಹಾರೋಹಳ್ಳಿ ಪೊಲೀಸರು ಕೃತ್ಯ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಆಗಿದ್ದರಿಂದ ಸದರಿ ಪಿರ್ಯಾದಿಯನ್ನು ಕನಕಪುರ ಪುರ ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸುವಂತೆ ಕಳುಹಿಸಿಕೊಟ್ಟಿದ್ದು, ನಂತರ ಕನಕಪುರ ಪೊಲೀಸ್ ಠಾಣೆಗೆ ಬಂದು ಆರೋಪಿತರ ವಿರುದ್ದ ಕ್ರಮ ಕೈಗೊಳ್ಳುವಂತೆ ನಾವು ದೂರನ್ನು ಕೊಟ್ಟಿರುತ್ತೇವೆ. ದೂರಿನೊಂದಿಗೆ ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಪೊಲೀಸರಿಗೆ ನೀಡಿರುತ್ತೇನೆ.

## ಪಾಟೀ ಸವಾಲು ಆರೋಪಿ ಪರ ಶ್ರೀ ಕೆ.ಎನ್.ಎಂ ವಕೀಲರಿಂದಃ-

ನನ್ನ ತಾಯಿಯ ಮರಣದ ನಂತರ ನಾವು ಸಹೋದರರು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಸಹೋದರರ ಮದ್ಯ ಭಿನ್ನಾಭಿಪ್ರಾಯ ಇದ್ದುದ್ದರಿಂದ ಪೌತಿ ಖಾತೆ ಮಾಡಿಸಿಕೊಂಡಿರುವುದಿಲ್ಲ. ವಿವಾದಿತ ಜಮೀನು ನನ್ನ ತಾಯಿಗೆ ಯಾವ ರೀತಿ ಬಂದಿರುತ್ತದೆ ಎಂದು ತೋರಿಸಲು ಪೊಲೀಸರಿಗೆ ದಾಖಲೆಗಳನ್ನು ಕೊಟ್ಟಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ದಾಖಲೆ ನೀಡಿದ ಬಗ್ಗೆ ನನಗೆ ನೆನಪಿರುವುದಿಲ್ಲ, ಆದರೆ ನನ್ನ ತಾಯಿ ದಿ.31.05.1968 ರಂದು ನನ್ನ ತಾಯಿ ಕೆಂಪಮ್ಮ ರವರು ನಾರಾಯಣರಾವ್ ಮತ್ತು ನರಸುಬಾಯಿ ಇವರಿಂದ ಖರೀದಿ ಪಡೆದಿದ್ದರು. ನಾನು ಕೆಂಪಮ್ಮ ಇವರ ಮಗ ಎಂದು ತೋರಿಸಲು ಪೊಲೀಸರಿಗೆ ದಾಖಲೆ ಕೊಟ್ಟಿರುತ್ತೇನೆ.

ನ್ಯಾಯಾಲಯದ ಮುಂದಿರುವ ಆರೋಪಿಯ ಹೆಸರು ಮಾದೇಗೌಡ ಎಂದು ಇರುತ್ತದೆ. ಆರೋಪಿಯನ್ನು ಆರೋಪಿಯ ಹೆಸರನ್ನು ಕೇಳಲಾಗಿ ತನ್ನ ಹೆಸರು ಮಾದೇಗೌಡ ಎಂದು ಹೇಳಿರುತ್ತಾನೆ. ಆರೋಪಿ ಮಾದೇಗೌಡ ಪರಿಚಿತರು ಎಂದರೆ

ಸಾಕ್ಷಿಯು ಭೇಟಿಯಾದ ಮಾತನಾಡುತ್ತಿದ್ದೆವು ಎಂದು ನುಡಿಯುತ್ತಾರೆ. ಆರೋಪಿ ಮಾದೇಗೌಡರ ಗ್ರಾಮಕ್ಕೂ ಮತ್ತು ನಮ್ಮ ಗ್ರಾಮಕ್ಕೂ ಅಂದಾಜು 5 ಕಿ.ಮಿ ಅಂತರ ಇದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ670/2013

| **ಚಾಸಾ ಃ** | **4** | **ಪ್ರಾಸಾಃ-** | **3** |
|---|---|---|---|

| | |
|---|---|
| ಹೆಸರು | ನಾಗರಾಜು |
| ತಂದೆಯ ಹೆಸರು | ಲಿಂಗಪ್ಪ |
| ವಯಸ್ಸು | 67 |
| ಉದ್ಯೋಗ | ನಿವೃತ್ತ ನೌಕರ |
| ವಿಳಾಸ | ಶಂಬೇಗೌಡನದೊಡ್ಡಿ ಗ್ರಾಮ |

- - - - - - - - - - - - - - - - - - - - - - - - - - - - - -

**ದಿಃ06.09.2022ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ಚಾಸಾ-1 ರಿಂದ 3 ನನಗೆ ಅಣ್ಣಂದಿರಾಗಬೇಕು. ಆರೋಪಿತರು ವೈಯಕ್ತಿಕವಾಗಿ ಗೊತ್ತಿರುವುದಿಲ್ಲ, ಆದರೆ ಸುಳ್ಳು ದಾಖಲೆ ಸೃಷ್ಟಿಸಿ ಜಮೀನನ್ನು ಖಾತೆ ಮಾಡಿಸಿಕೊಂಡ ವ್ಯಕ್ತಿಗಳಾಗಿರುತ್ತಾರೆ.

ಕಡಸಿಕೊಪ್ಪ ಗ್ರಾಮದಲ್ಲಿ ನಮ್ಮ ತಾಯಿ ಕೆಂಪಮ್ಮ ಇವರಿಗೆ ಸೇರಿದ ಸರ್ವೆ ನಂ.91/1 ಕ್ಷೇತ್ರ 1 ಎಕರೆ ಜಮೀನು ಅವರ ಮರಣದ ನಂತರ ನಾವು ಸದರಿ ಜಮೀನಿನ ಸ್ವಾಧೀನಾನುಭವದಲ್ಲಿ ಇರುತ್ತೇವೆ. ನನ್ನ ತಾಯಿ ದಿನಾಂಕ.03.10.1997 ರಂದು ಮೃತಪಟ್ಟಿರುತ್ತಾರೆ. ದಿನಾಂಕ.1.2.2012 ರಂದು ಕನಕಪುರ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ 1 ನೇ ಆರೋಪಿ ಇತರ ಆರೋಪಿಗಳ ಜೊತೆ ಸೇರಿಕೊಂಡು ನನ್ನ ತಾಯಿಯ ಹೆಸರಿಗಿದ್ದ ಸರ್ವೆ ನಂ.91/1 ನ್ನು ತನ್ನ ಹೆಸರಿಗೆ ಕ್ರಯ ನೋಂದಣೆ ಮಾಡಿಸಿಕೊಂಡು ನಂತರ

ತನ್ನ ಹೆಸರಿಗೆ ಖಾತೆಗಳನ್ನು ಬದಲಾಯಿಸಿಕೊಂಡಿರುತ್ತಾನೆ. ನನ್ನ ತಾಯಿ ಕೆಂಪಮ್ಮಳ ಹೆಸರಿನಲ್ಲಿ ಬೇರೊಬ್ಬ ವೃದ್ದೆಯನ್ನು ಕೆಂಪಮ್ಮ ಎಂದು ತೋರಿಸಿ ಪೋಟೋ ತೆಗೆಯಿಸಿ ಅಕ್ರಮ ನೋಂದಣಿ ಮಾಡಿಕೊಂಡು 1ನೇ ಆರೋಪಿ ಇತರ ಆರೋಪಿತರೊಂದಿಗೆ ಕೊಡಿಕೊಂಡು ತನ್ನ ಹೆಸರಿಗೆ ಖಾತೆ ಮಾಡಿಕೊಂಡಿದ್ದು ಇರುತ್ತದೆ. ಅಕ್ರಮ ಕ್ರಯ ನೋಂದಣಿಯಾದ ಒಂದು ವಾರದ ನಂತರ ನಮಗೆ ತಿಳಿದುಬಂದಿರುತ್ತದೆ. ನಂತರ ದಿ.20.04.2012 ರಂದು ಹಾರೋಹಳ್ಳಿ ಪೊಲೀಸ್ ಠಾಣೆಗೆ ದೂರನ್ನು ದಾಖಲಿಸಿರುತ್ತೇವೆ. ದಿನಾಂಕ.11.05.2012 ರಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಅವರ ಪಾಟೀ ಸವಾಲನ್ನು ಮಾಡಲು ಅವಕಾಶ ಕೋರಿದ್ದು, ನೀಡಲಾಯಿತು.**

**ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿನಾಂಕ.11.05.2012 ರಂದು ಕನಕಪುರ ಪುರ ಪೊಲೀಸ್ ಠಾಣೆಯಲ್ಲಿ ನಾನು ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಯಾರು ಎಂದು ಗೊತ್ತಿರುವುದಿಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್‌ಸಿ ಕನಕಪುರ.**